


## ಮಗದೊಬ್ಬನ ಮಹಾಪುರಾಣ

ಎದುರಾಳಿ ಇರದಿದ್ದರೆ
ನಿದ್ದೆ ಬರುವುದಿಲ್ಲ ಎನ್ನುತ್ತಾನೆ ಒಬ್ಬ
ಎದುರಾಳಿ ಇದ್ದರೇನೇ
ನಿದ್ದೆ ಬರುವುದಿಲ್ಲ ಎನ್ನುತ್ತಾನೆ ಇನ್ನೊಬ್ಬ

ಎರಡೂ ಇದ್ದು ಏನೂ ಇರದ
ಸ್ಥಿತಿಗತಿಯ ಪರಮ ಪದವೀಧರ ಮತ್ತೊಬ್ಬ
ಎಲ್ಲ ಅಲ್ಲಂಡೆ ಅರವತ್ತರ ನಡುವೆ
ಸಂತೆಯಲ್ಲಿ ಕಳಚುವ ಸರ್ವಾಧಿಕಾರಿ ಮಗದೊಬ್ಬ

ಒಬ್ಬ ಇನ್ನೊಬ್ಬ ಮತ್ತೊಬ್ಬರ ನಡುವೆ
ಈ ಮಗದೊಬ್ಬನದೇ ಮಹಾಪುರಾಣ

ಇವನು
ಎಲ್ಲರ ನಿದ್ದೆ ಕತ್ತರಿಸುತ್ತಾನೆ
ಎಲ್ಲರ ಬುದ್ಧಿ ಕತ್ತರಿಸುತ್ತಾನೆ
ಎಲ್ಲರ ಸುಳಿಸುದ್ದಿಗಳ ತಲೆ ಕತ್ತರಿಸುತ್ತಾನೆ.

ಹೀಗಾಗಿ
ಇಲ್ಲಿ ಓಡಾಡುವ ಮುಂಡಗಳು
ಒಂದಕ್ಕೊಂದು ಡಿಕ್ಕಿಹೊಡೆಯದೆ
ಕೈಗೆ ಕೈ ಮಿಲಾಯಿಸದೆ
ಮಾತು ಆಡುತ್ತಲೇ ಮಾತು ಸತ್ತವರಾಗಿ
ನೆರಳುಗಳಾಗಿ ಬಿಳಿಲುಗಳಾಗಿ
ಹೀಗೆ ಸಾಗುತ್ತವೆ ಸಾಲು ಸಾಲಾಗಿ.

## ನನ್ನ ಮಾತು

ನನ್ನ ಬರಹದ ಬಗ್ಗೆ ನನಗೇ ಎಷ್ಟೋ ಸಾರಿ
ಇನ್ನಿಲ್ಲದ ಅತೃಪ್ತಿ. ಅದು ಹೀಗೆ ಎಂದು
ಹೇಳಲಾಗದ ಪರಿಯ ಅತೃಪ್ತಿ.
ಇದ್ದಕ್ಕಿದ್ದಂತೆ ಧುತ್ತನೆ ಎರಗುವ ಅತೃಪ್ತಿ.

ಆಗೆಲ್ಲಾ
ಅದನ್ನು ಮರೆಯುವುದಕ್ಕೆ ನಾನು
ಅನುವಾದಿತ ಕೃತಿಗಳನ್ನು ಓದುತ್ತೇನೆ.
ಅಲ್ಲಿನ ಅನುಭವಲೋಕ
ತೀರಾ ಸಾಮಾನ್ಯ ಅನ್ನಿಸಿದಾಗ
ಇನ್ನಿಲ್ಲದ ಆತ್ಮವಿಶ್ವಾಸ ಮರುಕಳಿಸುತ್ತದೆ.
ಮತ್ತೆ ಅಳುಕು, ಮನದಲ್ಲಿ
ಪ್ರಶ್ನೆ ಹಾಕಿಕೊಳ್ಳುತ್ತದೆ.
ಈ ಅನುವಾದಕನ ಆಯ್ಕೆಯೇ ಕಳಪೆಯದ್ದಿರ
ಬಹುದೇ? ಜಾಗತಿಕ ವ್ಯಾಪ್ತಿಯ ಪ್ರಸಿದ್ಧರ
ಒಮ್ಮೆ ನೆನೆ ಎಂದು ಅರಿವು ಎಚ್ಚರಿಸುತ್ತದೆ.

